| ವರ್ಷ | ಆತಿಥ್ಯ | ವಿಜೇತ | ರನ್ನರ್ಸ್ ಅಪ್ |
|---|---|---|---|
| 1973 | ಇಂಗ್ಲೆಂಡ್ | ಇಂಗ್ಲೆಂಡ್ | ಆಸ್ಟ್ರೇಲಿಯಾ |
| 1978 | ಭಾರತ | ಆಸ್ಟ್ರೇಲಿಯಾ | ಇಂಗ್ಲೆಂಡ್ |
| 1982 | ನ್ಯೂಜಿಲೆಂಡ್ | ಆಸ್ಟ್ರೇಲಿಯಾ | ಇಂಗ್ಲೆಂಡ್ |
| 1988 | ಆಸ್ಟ್ರೇಲಿಯಾ | ಆಸ್ಟ್ರೇಲಿಯಾ | ಇಂಗ್ಲೆಂಡ್ |
| 1993 | ಇಂಗ್ಲೆಂಡ್ | ಇಂಗ್ಲೆಂಡ್ | ನ್ಯೂಜಿಲೆಂಡ್ |
| 1997 | ಭಾರತ | ಆಸ್ಟ್ರೇಲಿಯಾ | ನ್ಯೂಜಿಲೆಂಡ್ |
| 2000 | ದ.ಆಫ್ರಿಕಾ | ಆಸ್ಟ್ರೇಲಿಯಾ | ಭಾರತ |
| 2009 | ಆಸ್ಟ್ರೇಲಿಯಾ | ಇಂಗ್ಲೆಂಡ್ | ನ್ಯೂಜಿಲೆಂಡ್ |
| 2013 | ಭಾರತ | ಆಸ್ಟ್ರೇಲಿಯಾ | ವೆಸ್ಟ್‌ಇಂಡೀಸ್ |
| 2017 | ಇಂಗ್ಲೆಂಡ್ | ಇಂಗ್ಲೆಂಡ್ | ಭಾರತ |
| 2022 | ನ್ಯೂಜಿಲೆಂಡ್ | ಆಸ್ಟ್ರೇಲಿಯಾ | ಇಂಗ್ಲೆಂಡ್ |



ಭಾರತ ತಂಡದ ಆಲ್‌ರೌಂಡರ್ ದೀಪ್ತಿ ಶರ್ಮಾ–ಪಿಟಿಐ ಚಿತ್ರ

ಹೊಸದೊಂದು ಸುಧಾರಣಾ ಪರ್ವದತ್ತ ಹೆಜ್ಜೆ ಹಾಕಿದ್ದು ಸುಸ್ಪಷ್ಟ. ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಇಂಗ್ಲೆಂಡ್ ಮಹಿಳಾ ತಂಡಗಳು ಸಾಗಿರುವ ದೂರ ಅಗಾಧವಾದದ್ದು. ಆದರೆ ಅವರ ಮಟ್ಟಕ್ಕೆ ಬೆಳೆಯಲು ಭಾರತದ ವನಿತೆಯರು ಎದುರಿಸಿದ ಮತ್ತು ಎದುರಿಸುತ್ತಿರುವ ಸವಾಲುಗಳು ಒಂದೆರಡಲ್ಲ. ಮೊದಲನೆಯದಾಗಿ ಹಲವು ವರ್ಷಗಳ ಕಾಲ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಬೆಂಬಲವೇ ವನಿತೆಯರ ಕ್ರಿಕೆಟ್‌ಗೆ ಲಭಿಸಿರಲಿಲ್ಲ.

ಆದರೆ ಭಾರತ ಟೆಸ್ಟ್ ತಂಡದ ಮೊದಲ ನಾಯಕಿ, ಕನ್ನಡತಿ ಶಾಂತಾ ರಂಗಸ್ವಾಮಿ, ಡಯಾನಾ ಎಡುಲ್ಜಿ, ಕಲ್ಪನಾ, ಮಿಥಾಲಿ ರಾಜ್, ಜೂಲನ್ ಗೋಸ್ವಾಮಿ ಅವರು ಆಟದಲ್ಲಿ ತೋರಿದ ಸಾಧನೆ ಮತ್ತು ಕ್ರಿಕೆಟ್ ಬೆಳವಣಿಗೆಗೆ ಮಾಡಿದ ಹೋರಾಟ ಅಸಾಧಾರಣವಾದದ್ದು. ದಶಕಗಳ ಹೋರಾಟದಿಂದಾಗಿ ಬಿಸಿಸಿಐ ಮಾನ್ಯತೆ ದೊರೆತಿದೆ. ಇತ್ತೀಚಿನ ದಿನಗಳಲ್ಲಿ ಮಹಿಳಾ ಕ್ರಿಕೆಟಿಗರಿಗೂ ಪುರುಷರಷ್ಟೇ ಸಮಾನ ಸಂಭಾವನೆ, ಸೌಲಭ್ಯಗಳು ದಕ್ಕುತ್ತಿವೆ. ತರಬೇತಿ ಸೌಲಭ್ಯಗಳು ಹೆಚ್ಚಿವೆ. ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಜನಪ್ರಿಯಗೊಂಡಿದೆ.

ಐಪಿಎಲ್‌ನಂತೆ ಮಹಿಳೆಯರಿಗೂ ಫ್ರ್ಯಾಂಚೈಸಿ ಲೀಗ್ ಶುರು ಮಾಡಬೇಕು ಎಂದು ಬಿಸಿಸಿಐಗೆ ಮನವಿ ಮಾಡಿದ್ದಾಗ ಕೆಲವರು , 'ಇಡೀ ದೇಶದಲ್ಲಿ ಐದಾರು ತಂಡಗಳನ್ನು ಮಾಡುವಷ್ಟು ಆಟಗಾರ್ತಿಯರೇ ಇಲ್ಲ. ಅದ್ಹೇಗೆ ಲೀಗ್ ಶುರು ಮಾಡೋದು' ಎಂದು ವ್ಯಂಗ್ಯವಾಡಿದ್ದರು. ಆದರೆ ಕಳೆದ ಮೂರು ವರ್ಷಗಳಿಂದ ನಡೆಯುತ್ತಿರುವ ಡಬ್ಲ್ಯುಪಿಎಲ್‌ನಲ್ಲಿ ಆಡಲು ಹುಡುಗಿಯರ ದಂಡೇ ಹರಿದುಬರುತ್ತಿರುವುದು ಸುಳ್ಳಲ್ಲ. ದೇಶದ ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳು ಈಗ ಕ್ರಿಕೆಟ್‌ನತ್ತ ಮುಖ ಮಾಡುತ್ತಿದ್ದಾರೆ. ಪಾಲಕರೂ ತಮ್ಮ ಹೆಣ್ಮಕ್ಕಳನ್ನು ಕ್ರಿಕೆಟ್‌ಗೆ ಕಳಿಸಲು ಒಲವು ತೋರುತ್ತಿದ್ದಾರೆ. ಪೈಪೋಟಿ ಹೆಚ್ಚಿದಂತೆ ರಾಷ್ಟ್ರೀಯ ತಂಡಗಳ ಗುಣಮಟ್ಟವೂ ಹೆಚ್ಚುತ್ತಿದೆ.

ಬ್ಯಾಟಿಂಗ್ ತಾರೆ ಮಿಥಾಲಿ ರಾಜ್ ಮತ್ತು ದಾಖಲೆಗಳ ಬೌಲರ್ ಜೂಲನ್ ಗೋಸ್ವಾಮಿ ಅವರ ನಿವೃತ್ತಿಯ ನಂತರ ಯಾರು ಎಂಬ ಚಿಂತೆ ಈಗ ಇಲ್ಲ. ಮಿಥಾಲಿ ಅವರಷ್ಟು ದೀರ್ಘ ಕಾಲ ತಂಡದಲ್ಲಿದ್ದು ಹಲವಾರು ದಾಖಲೆ ಕಟ್ಟುವವರು ಬರುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ಸ್ಮೃತಿ, ಪ್ರತಿಕಾ ರಾವಳ್ ಮತ್ತು ಹರ್ಲಿನ್ ಅವರಂತಹ ಮ್ಯಾಚ್ ವಿನ್ನಿಂಗ್ ಹುಡುಗಿಯರು ಬೆಳೆದಿದ್ದಾರೆ. ಜೂಲನ್ ಅವರಷ್ಟೇ ನಿಖರವಾಗಿ ಬೌಲಿಂಗ್ ಹೊಣೆ ನಿಭಾಯಿಸುವ ಮಧ್ಯಮವೇಗದ ದಂಡು ಸಿದ್ಧವಾಗಿದೆ. ಸ್ಪಿನ್ನರ್‌ಗಳಂತೂ ಸಾಲುಗಟ್ಟಿದ್ದಾರೆ. ಹೀಗಾಗಿ ಆಂತರಿಕ ಪೈಪೋಟಿ ಮುಗಿಲುಮುಟ್ಟಿದೆ. ಇದು ತಂಡವನ್ನು ಸಬಲಗೊಳಿಸುತ್ತಿರುವುದು ಸುಳ್ಳಲ್ಲ.

ಇತ್ತೀಚೆಗಷ್ಟೇ ನಡೆದ ಆಸ್ಟ್ರೇಲಿಯಾ ಎದುರಿನ ಏಕದಿನ ಕ್ರಿಕೆಟ್ ಸರಣಿಯನ್ನೇ ನೋಡಿ. ಆ ಸರಣಿಯ ಕೊನೆಯ ಪಂದ್ಯದಲ್ಲಿ ಆಸ್ಟ್ರೇಲಿಯಾ ಪೇರಿಸಿಟ್ಟಿದ 412 ರನ್‌ಗಳ ಬೃಹತ್ ಗುರಿಯನ್ನು ಭಾರತ ತಂಡವು ಬೆನ್ನಟ್ಟಿದ ರೀತಿ ಅನನ್ಯ. ಆ ಪಂದ್ಯದಲ್ಲಿ ಭಾರತ ಜಯಿಸಲಿಲ್ಲ ನಿಜ. ಆದರೆ ಮಾಡಿದ ಪ್ರಯತ್ನ ಉತ್ಕೃಷ್ಟ ಮಟ್ಟದ್ದು. ಮಂದಾನ ಅವರ ಬಿರುಸಿನ ಶತಕ, ನಾಯಕಿ ಕೌರ್ ತೋರಿದ ದಿಟ್ಟ ಬ್ಯಾಟಿಂಗ್ ಕೂಡ ಅಮೋಘವಾದದ್ದು. ಆದರೆ ಅವರಿಬ್ಬರೂ ಔಟಾದರೆ ತಂಡದ ಕತೆ ಮುಗಿಯಿತು


ಭಾರತ ತಂಡದ ವಿಕೆಟ್‌ಕೀಪರ್ ರಿಚಾ ಘೋಷ್





ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ –ಎಎಫ್‌ಪಿ ಚಿತ್ರ